**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯಃ ಕೊಪ್ಪ**

**ಸಿ.ಸಿ. ನಂ.*83/2020***

***ಫಿರ್ಯಾದುದಾರರುಃ*** **ಸರ್ಕಾರದ ಪರವಾಗಿ ಕೊಪ್ಪ ಪೊಲೀಸರು**

**ವಿರುದ್ಧ**

***ಆರೋಪಿ/ತರುಃ*** *ಧನಪಾಲ ಅಲಿಯಾಸ್ ಧನಪಾಲ ಶೆಟ್ಟಿ ಬಿನ್ ಮೋಹನದಾಸ ಶೆಟ್ಟಿ, **25** ವರ್ಷ, ಬಡಿಗ ಮಿಜಾರ್, ಮೂಡುಬಿದರೆ ಅಶ್ವಥಪುರ, ದಕ್ಷಿಣ ಕನ್ನಡ ಜಿಲ್ಲೆ.*

## <u>ದೋಷಾರೋಪಣೆ</u>

ಶ್ರೀಮತಿ ಎಂ.ಎನ್. ನಂದಿನಿ, ಬಿ.ಎ., ಎಲ್.ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ಕೊಪ್ಪ ಆದ ನಾನು ಮೇಲ್ಕಂಡ ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕ ***9/10.02.1990*** ರ ರಾತ್ರಿ ***1.30*** ಗಂಟೆ ಸಮಯದಲ್ಲಿ ಕೊಪ್ಪ ಪಟ್ಟಣದ ಮೇಲಿನಪೇಟೆ ಜಯಪುರ ರಸ್ತೆಯಲ್ಲಿ ಆರೋಪಿಯಾದ ನೀವು ಮೂಲ ಸಿ.ಸಿ. ನಂಃ ***526/1991*** ರ ಇತರೇ ಆರೋಪಿತರೊಂದಿಗೆ ಸೇರಿಕೊಂಡು ಚಾಸಾ.***2*** ಯು.ಎನ್. ನಾರಾಯಣ ಪಿಳ್ಳೈರವರ ಮನೆಯ ಮುಂಭಾಗದಲ್ಲಿ ನಿಲ್ಲಿಸಿದ್ದ ಚಾಸಾ ***2*** ರವರ ಬಾಬ್ತು ಸುಮಾರು ***2,00,000/-*** ರೂ. ಬೆಲೆ ಬಾಳುವ ಎಂ.ವೈ.ಸಿ. ***5427*** ನೇ ಸಂಖ್ಯೆಯ ಲಾರಿಯನ್ನು ಸದರಿ ಲಾರಿಯ ಕ್ಯಾಬಿನ್ನಲ್ಲಿ ಮಲಗಿದ್ದ ಲಾರಿ ಚಾಲಕ ಚಾಸಾ.***1*** ಅಣ್ಣಪ್ಪರವರಿಗೆ ಸದರಿ ಲಾರಿಯನ್ನು ಸುಲಿಗೆ ಮಾಡಿಕೊಂಡು ತೆಗೆದುಕೊಂಡು ಹೋಗುವ ಉದ್ದೇಶದಿಂದ ಚಾಕು ತೋರಿಸಿ, ಬೆದರಿಕೆ ಹಾಕಿ ಕಣ್ಣಿಗೆ, ಬಾಯಿಗೆ ಬಟ್ಟೆ ಕಟ್ಟಿ ಲಾರಿಯನ್ನು ಅಪಹರಿಸಿಕೊಂಡು ಜಯಪುರ ಅಗಳಗಂಡಿ ರಸ್ತೆಯ ಕೂಳೂರು ಗ್ರಾಮದ ಮಡುವಿನಕೆರೆ ಕಾಡಿನಲ್ಲಿ ಚಾಸಾ ***1*** ರವರನ್ನು ಮರಕ್ಕೆ ಹಗ್ಗದಿಂದ ಕಟ್ಟಿಹಾಕಿ ಅಕ್ರಮವಾಗಿ ಪ್ರತಿಬಂಧನದಲ್ಲಿಟ್ಟು ಭಾ.ದಂ. ಸಂ. ಕಲಂ ***342*** ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಮುಂದುವರೆದು ಮೂಲ ಸಿ.ಸಿ. ನಂಃ 526/1991 ರ ಇತರೇ ಆರೋಪಿತರೊಂದಿಗೆ ಸೇರಿಕೊಂಡು ಚಾಸಾ.2 ಯು.ಎನ್. ನಾರಾಯಣ ಪಿಳ್ಳೈರವರ ಮನೆಯ ಮುಂಭಾಗದಲ್ಲಿ ನಿಲ್ಲಿಸಿದ್ದ ಚಾಸಾ 2 ರವರ ಬಾಬ್ತು ಸುಮಾರು 2,00,000/- ರೂ. ಬೆಲೆ ಬಾಳುವ ಎಂ.ವೈ.ಸಿ. 5427 ನೇ ಸಂಖ್ಯೆಯ ಲಾರಿಯನ್ನು ಸದರಿ ಲಾರಿಯ ಕ್ಯಾಬಿನ್ನಲ್ಲಿ ಮಲಗಿದ್ದ ಲಾರಿ ಚಾಲಕ ಚಾಸಾ.1 ಅಣ್ಣಪ್ಪರವರಿಗೆ ಸದರಿ ಲಾರಿಯನ್ನು ಸುಲಿಗೆ ಮಾಡಿಕೊಂಡು ತೆಗೆದುಕೊಂಡು ಹೋಗುವ ಉದ್ದೇಶದಿಂದ ಚಾಕು ತೋರಿಸಿ, ಬೆದರಿಕೆ ಹಾಕಿ ಕಣ್ಣಿಗೆ, ಬಾಯಿಗೆ ಬಟ್ಟೆ ಕಟ್ಟಿ ಲಾರಿಯನ್ನು ಅಪಹರಿಸಿಕೊಂಡು ಜಯಪುರ ಅಗಳಗಂಡಿ ರಸ್ತೆಯ ಕೂಳೂರು ಗ್ರಾಮದ ಮಡುವಿನಕೆರೆ ಕಾಡಿನಲ್ಲಿ ಚಾಸಾ.1 ರವರನ್ನು ಮರಕ್ಕೆ ಹಗ್ಗದಿಂದ ಕಟ್ಟಿಹಾಕಿ ಲಾರಿಯನ್ನು ಅಪಹರಿಸಿಕೊಂಡು

ಹೋಗಿ, ಭಾ.ದಂ. ಸಂ. ಕಲಂ ***392*** ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಪ್ರ:1ಃ ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೆ?

ಉಃ ತಿಳಿಯಿತು.

ಪ್ರ:2ಃ ತಪ್ಪು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆ ಆಗಬೇಕಾ?

ಉಃ ವಿಚಾರಣೆಯಾಬೇಕು.

ಈ ಮೇಲ್ಕಂಡ ದೋಷಾರೋಪಣೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಡೀಕರಿಸುತ್ತೇನೆ.

ದಿನಾಂಕ 12.06.2025.

ಸಹಿ/- 12.06.2025.

(ಎಂ.ಎನ್. ನಂದಿನಿ)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧನ್ಯಾದಂಃ ಕೊಪ್ಪ.